

ಜೋಳವಾಳಿಯಾನಲ್ಲ, ವೇಳೆವಾಳಿಯವ
ನಾನಯ್ಯಾ
ಹಾಳುಗೆಟ್ಟೋಡುವ ಆಳು ನಾನಲ್ಲಯ್ಯಾ;
ಕೇಳು, ಕೂಡಲಸಂಗಮದೇವಾ,
ಮರಣವೇ ಮಹಾನವಮಿ!
— ಬಸವಣ್ಣ

***

ಪ್ರತಿ ಜೀವಿಗೂ ಹುಟ್ಟು–ಸಾವು ಎಂಬುದು ಸಹಜ. ಹುಟ್ಟು ಅನಿರೀಕ್ಷಿತವಾದರೂ ಸಾವು ನಿರೀಕ್ಷಿತ. ಆದರೂ ಮನುಷ್ಯ ಸಾವಿಗೆ ಹೆದರುವಷ್ಟು ಬೇರೆ ಯಾವುದಕ್ಕೂ ಹೆದರುವುದಿಲ್ಲ. ವಯೋಸಹಜ ಮುಪ್ಪಿನಿಂದಲೋ, ರೋಗರುಜಿನಗಳಿಂದಲೋ ಅಥವಾ ಅಪಘಾತ ಇತ್ಯಾದಿ ಆಕಸ್ಮಿಕಗಳಿಂದಲೋ ಸಾವು ನಮ್ಮನ್ನು ಆವರಿಸಬಹುದು. ಕೆಲವೆಡೆ ಸಾವು ನಿರೀಕ್ಷಿತವಾಗಿದ್ದರೆ, ಮತ್ತೆ ಕೆಲವೆಡೆ ಆಕಸ್ಮಿಕ. ಹಾಗಾಗಿಯೇ, ಹುಟ್ಟು–ಸಾವು ಎರಡೂ ನಮ್ಮ ಕೈಯಲಿಲ್ಲ. ಅದು ವಿಧಿಯ ಕೈಯಲ್ಲಿದೆ ಎಂಬ ಮಾತು ಜನಜನಿತ. ಆದರೆ, ವಿಜ್ಞಾನ–ತಂತ್ರಜ್ಞಾನದ ಆವಿಷ್ಕಾರ ಇಂದು ಜನನವನ್ನಷ್ಟೇ ಅಲ್ಲ, ಮರಣವನ್ನೂ ನಿಯಂತ್ರಿಸಬಲ್ಲದು. ಬೇಕೆಂದರೆ ಜನನ–ಮರಣವನ್ನೂ ಕರುಣಿಸಬಲ್ಲದು!.

ಶರಶಯ್ಯೆಯಲ್ಲಿ ಮಲಗಿ ಭೀಷ್ಮನಾಗಲು ಹೊರಟವರು ಈಗ ಇಚ್ಛಾಮರಣವನ್ನೋ, ದಯಾಮರಣವನ್ನೋ ಅಪ್ಪಬಹುದು. ಮುಪ್ಪಿನಲ್ಲಿ ಮತ್ತೊಬ್ಬರಿಗೆ ಹೊರೆಯಾಗದೇ, ನೋವಿನಿಂದ ಮುಕ್ತಿ ಪಡೆಯಲು ಘನತೆಯಿಂದ ಸಾವನ್ನೂ ಆಹ್ವಾನಿಸಿಕೊಳ್ಳಬಹುದು. ಆದರೆ, ಅದಕ್ಕೆ ನೀವೊಂದು ಉಯಿಲು ಬರೆದು, ಕಾನೂನು, ಆರೋಗ್ಯ ಇಲಾಖೆಯ ದಯೆಗೆ ಕಾಯಬೇಕಷ್ಟೇ! ಹಾಗೆ ಅವರು ಕರುಣಿಸುವ ಮರಣವೇ ದಯಾಮರಣ.

ಮನುಷ್ಯನ ಘನತೆಯ ಸಾವು ಖಾತರಿಗೆ ಕರ್ನಾಟಕ ಸರ್ಕಾರದ ಆರೋಗ್ಯ ಇಲಾಖೆಯು ಈಚೆಗಷ್ಟೇ ಮಹತ್ವದ ಆದೇಶ ನೀಡಿದೆ. ಈ ಆದೇಶ ಅನುಷ್ಠಾನದ ಹಿಂದಿರುವುದು ಸುಪ್ರೀಂ ಕೋರ್ಟ್ 2023ರ ಜನವರಿ 24ರಂದು ನೀಡಿದ ದಯಾಮರಣದ ತೀರ್ಪು. ಮರಣ

## ಮಾನಸಿಕ ಆರೋಗ್ಯವೂ ಮುಖ್ಯ

ದಯಾಮರಣಕ್ಕೆ ಕೋರುವ ವ್ಯಕ್ತಿಗಳ ಮಾನಸಿಕ ಆರೋಗ್ಯ ಸದೃಢವಾಗಿರಬೇಕು. ಕಾಯಿಲೆಯಿಂದ ಖಿನ್ನತೆಗೀಡಾಗಿ ಅಥವಾ ನೋವು ತಾಳಲಾರದೇ ಸಾವನ್ನು ಬಯಸಿದ ಮಾತ್ರಕ್ಕೆ ಆ ರೋಗಿಗೆ ದಯಾಮರಣ ನೀಡಲಾಗದು.

ದಯಾಮರಣ ಬೇಕೆಂದು ನಿರ್ಧರಿಸಿದಾಗ ರೋಗಿಯ ಮನಸ್ಥಿತಿ ಹೇಗಿದೆ ಎಂಬುದನ್ನು ಪರಿಶೀಲಿಸಬೇಕು. ದಯಾಮರಣ ಸಂದರ್ಭದಲ್ಲಿ ಆತ್ಮಹತ್ಯೆಯ ಮತ್ತೊಂದು ರೂಪ ಅಂತಲೂ ಹೇಳಲಾಗುತ್ತದೆ. ಖಿನ್ನತೆಯಿಂದ ಕೆಲವರು ಆತ್ಮಹತ್ಯೆ ಮಾಡಿಕೊಂಡರೆ, ದಯಾಮರಣದಲ್ಲಿ ರೋಗಿ ತಾನಿನ್ನು ಬದುಕಲಾರೆ, ಜೀವಚ್ಛವವಾಗಿದ್ದರೆ ಮರಣ ಕರುಣಿಸಿ ಎಂದು ಕೋರುತ್ತಾನೆ. ಕೆಲವು ಕಾಯಿಲೆಗಳು ರೋಗಿಗಳಲ್ಲಿ ಖಿನ್ನತೆಯನ್ನುಂಟು ಮಾಡುವ ಸಾಧ್ಯತೆ ಇರುತ್ತದೆ. ಆದರೆ, ಇದು ಆ ಸಂದರ್ಭದ ಸ್ಥಿತಿಯಾಗಿರುತ್ತದೆ. ಇದು ತಾತ್ಕಾಲಿಕ. ಹಾಗಾಗಿ, ರೋಗಿ ಖಿನ್ನತೆಯಿಂದಾಗಿ ದಯಾಮರಣ ಕೋರುತ್ತಿದ್ದಾನೆಯೇ ಎಂಬುದನ್ನು ಮನೋರೋಗ ತಜ್ಞರು ಪ್ರಾಥಮಿಕವಾಗಿ ವಿಶ್ಲೇಷಿಸಬೇಕು. ಬಳಿಕ ರೋಗಿಯ ನಿರ್ಧಾರದ ಹಿಂದಿರುವ ಸಾಧಕ–ಬಾಧಕದ ಬಗ್ಗೆ ಆತನಿಗೆ ಅರಿವಿದೆಯೇ, ಬುದ್ಧಿ ಸರಿಯಾಗಿದೆಯೇ ಎಂಬುದನ್ನೂ ನೋಡಬೇಕು. ಇದನ್ನು ಸಾಮರ್ಥ್ಯ ವಿಶ್ಲೇಷಣೆ ಎನ್ನಲಾಗುತ್ತದೆ. ಅಂತೆಯೇ ಯಾವ ಕಾರಣದಿಂದ ಈ ನಿರ್ಧಾರಕ್ಕೆ ಬರಲಾಗಿದೆ ಎಂಬುದನ್ನೂ ಪರಿಶೀಲಿಸುವುದು ಅಗತ್ಯ.



**-ಡಾ. ಶಶಿಧರ ಎಚ್.ಎನ್.**
ಮನೋರೋಗ ತಜ್ಞರು, ನಿಮ್ಹಾನ್ಸ್ ಆಸ್ಪತ್ರೆ